"ಕೇಳ್ರಪೋ... ಕೇಳ್ರಿ... ಹೇಳಲಿಲ್ಲಾಂದ್ರಿ... ಕೇಳಲಿಲ್ಲಾಂದ್ರಿ... ಅಗಸಿ ಮುಂದಿನ ಆಲದ ಮರ ಕಡಿಯು ವಿಚಾರಕ, ನಾಳಿ ಛಂಜಿಕ ಆಲದ ಕಟ್ಟೆಗೆ ಎಲ್ಲಾರೂ ಕೂಡಬೇಕಂತ ಡೊಂಗ್ರಾ ಹೊಡಿಯಾಕ ಹೇಳ್ಯಾರಪೋ..'' ಎನ್ನುತ್ತ ಪತ್ತಾರ ವಾಸಣ್ಣ ತನ್ನ ಹಿಂದಿಂದ ಬೆನ್ನತ್ತಿದ್ದ ಎಂಟ್ಹತ್ತು ಹುಡುಗರ ಕೂಡ ರುದ್ರಾಪುರದ ಮ್ಯಾಲಿನ ಓಣಿ, ಕೆಳಗಿನ ಓಣಿ, ನಾಲ್ಕು ರಸ್ತೆ ಕೂಡು ಜಾಗದಲ್ಲಿ ಡಂಗೂರ ಸಾರಿದ ನಂತರ ಊರ ಹೊರಗಿನ ಕೇರಿಯಲ್ಲಿ ಡಂಗೂರ ಹೊಡಿಯುತ್ತ ಸಾಗಿದಾಗ ಊರಿನ ಜನರಲ್ಲಿ ಗುಸುಗುಸು ಮಾತು ಶುರುವಾಗಿತ್ತು.

ಮರುದಿನ ಹೊತ್ತು ಮುಳುಗುವ ವೇಳೆಗೆ ಊರಲ್ಲಿ ವಿಷಯದ ಬಗ್ಗೆ ಆಸಕ್ತಿ ಇರುವವರು ಹಾಗೂ ಕುತೂಹಲಕ್ಕಾಗಿ ನೋಡಲು ಬಂದವರಿಂದ ಆಲದ ಕಟ್ಟೆಯ ಮುಂದಿನ ಪಟಾಂಗಣವೆಲ್ಲ ಕಿಕ್ಕಿರಿದು ತುಂಬಿತ್ತು. ಕಟ್ಟೆಯ ಮೇಲೆ ಊರಿನ ಹಿರಿಯ ಸ್ವಾತಂತ್ರ್ಯ ಯೋಧ ಪರಪ್ಪಜ್ಜ, ಚೇರಮನ್ ಪಂಚಾಕ್ಷರಿ, ಶಿವಶಂಕರಪ್ಪ, ಶೆಟ್ರ ಮಹಾಲಿಂಗಪ್ಪ, ಚನ್ನಬಸವಯ್ಯ ಇನ್ನಿತರ ಹಿರಿಯರು ಕೂತಿದ್ದರು. ನೇರವಾಗಿ ವಿಷಯಕ್ಕೆ ಬಂದ ಮಹಾಲಿಂಗಪ್ಪ, "ದೈವದ ಮುಂದ ಹೇಳೂದೇನೆಂದ್ರ, ನಿಮಗೆಲ್ಲಾ ಗೊತ್ತಿರೊ ವಿಷಯಾನ ಅದ. ಮೂರ್ನಾಲ್ಕು ತಿಂಗಳಿಂದಾ ಈಗ ನಾವ ಕುಂತಿರೊ ಕಟ್ಟೆ ಮತ್ತು ಆಲದ ಮರಾನ ಕಡೆಸಿ, ಅದರ ಜಾಗದಾಗ ಮಂಗಲ ಭವನ ಕಟ್ಟಬೇಕಂತ ಕೆಲವೊಬ್ಬರು ಇಚಾರ ಮಾಡಾಕ ಹತ್ಯಾರ. ಆದರ ತಲಿಮಾರಿನಿಂದ ಬಂದಂತ, ಅಲ್ದಾ ದೇಶಪ್ರೇಮಿ ಜನ ನೆಟ್ಟಂತ ಈ ಮರ ಕಡಿಯೋದು ಬ್ಯಾಡ, ಆ ಭವನಾನ ಬೇಕಾದ್ರ ಬ್ಯಾರೆ ಕಡೆ ಕಟ್ಟಿಸಬಹುದು ಅನ್ನೂದು ಬ್ಹಾಳ ಜನರ ಅಭಿಪ್ರಾಯ ಅದ. ಈ ವಿಷಯದ ಠರಾವ ಮಾಡೂದಕ ಈ ಸಭಾ ಕೂಡೆದ" ಎಂದನು.

ಅವನ ಮಾತಿಗೆ ಚೇರಮನ್ ಪಂಚಾಕ್ಷರಿ, "ಊರ ಅಗಸಿ ಮುಂದ ಮಂಗಲ ಭವನ ಇದ್ರ ಊರಿಗೂ ಒಂದ ಕಳ ಇರ್ತದ. ಹಂಗ ಊರಿನ ಜನರಿಗೆ ಛಲೋ ಆಗ್ತದ. ಅದಕಂತ ಈ ಆಲದ ಮರ ಕಡಿದು ಮಂಗಲ ಭವನ ಕಟ್ಟಿಸೋ ಇಚಾರ ಬರೊಬ್ಬರಿ ಅದ. ಏನ್ರಪಾ" ಎಂದು ಜನರತ್ತ ಕೈಮಾಡಿ ಕೇಳಿದಾಗ ಆತನ ಕಡೆಯ ಕೆಲವು ಯುವಕರು, "ಹೌದೌದು, ಪ್ರೆಸಿಡೆಂಟರ ಮಾತು ಖರೆ ಅದ. ಅಗಸಿ ಮುಂದ ಸುಮ್ನಾ ಇಷ್ಟಗಲ ಜಾಗ ಹಿಡದೈತಿ. ಅದನ ಕಡಿದು ಭವನ ಕಟ್ಟೋದು ಪಸಂದ ಅದ" ಎಂದರು.

"ಅದೇನ ನಿಮ್ಮ ಸ್ವಂತ ಜಾಗ ಹಿಡಿದಿಲ್ಲ. ಸರ್ಕಾರದ ಜಮೀನದ ಅದು. ಹಿಂದಿನ ತಲಿಮಾರಿನಿಂದ ಈ ಕಟ್ಟೆ ಮ್ಯಾಲ ಕುಂತ ಹಿರೇರು ಎಂತೆಂಥ ಜಗಳ ಬಗೇ ಹರಿಸ್ಯಾರ, ಅದರಿಂದ ಒಡೆದ ಹೋಗೋ ಎಷ್ಟೋ ಸಂಸಾರ ಒಂದಾಗ್ಯಾವ. ಅಂತಾದರಲ್ಲಿ ಇದು ಒಂದು ದೇವಸ್ಥಾನ ಇದ್ದಂಗ. ಅಲ್ದ ನಿಮಗ ಮಂಗಲ ಭವನ ಕಟ್ಟಿಸಬೇಕಂದ್ರ ಯಾರ್ದೂ ತಕರಾರಿಲ್ಲ. ಗಿಡದ ಮಗ್ಗಲ ರಗಡ ಜಾಗ ಅದ. ಅಲ್ಲಿ ಬೇಕಾದಂಗ ಕಟ್ಟಬಹುದು" ಎಂದು ಚನ್ನಬಸವಯ್ಯ ತನ್ನ ಸಲಹೆಯನ್ನು ಮುಂದಿಟ್ಟ.

"ಅದೆಂಗ ಆಗ್ತದ ಚನ್ನಬಸಪ್ಪಜ್ಜ, ಮೊನ್ನೆ ಪಂಚಾಯತಿ ಒಳಗ ಕುಂತ ನಾವೆಲ್ಲ ವಿಚಾರ ಮಾಡೇವಿ. ಏನ ಆದ್ರೂ ಇದಾ ಜಾಗದಾಗ ಆಗಬೇಕಂತ" ಎಂದು ಪಂಚಾಕ್ಷರಿ ಎನ್ನುತ್ತಿದ್ದಂತೆ ಪರಪ್ಪಜ್ಜ, "ನೀವ ಎಲ್ಲ ತೀರ್ಮಾನ ಮಾಡಿದ್ರ ಸಭಾ ಕೂಡಬೇಕಂತ ನಿನ್ನೆ ಯಾಕ ಡೊಂಗರ ಹೊಡಿಯಾಕ ಹೇಳಿದಿ ಸೂರಾ... ನನಗ ನಿನ್ನ ಹಕಿಕತ್ ಏನಂತ ಗೊತ್ತದ. ನೋಡು ಪಂಚಾಕ್ಷರಿ, ಕ್ಷುಲ್ಲಕ ವಿಚಾರ ಬಿಡು. ಊರಿಗೆ ಏನಾದ್ರೂ ಹಿತ ಆಗುವಂತಾ ಕೆಲಸ ಮಾಡ. ಆಗಲಾದ್ರೂ ಚೇರಮನ್ ಆದದ್ದಕ ಸಾರ್ಥಕ ಆಗ್ತದ" ಎಂದ.

"ಅಲ್ರಿ ಪರಪ್ಪಜ್ಜ, ಊರಿಗೆ ಛಲೋ ಆಗಲೆಂತನಾ ಹೌದಲ್ಲೊ ಮಂಗಲ ಭವನ ಕಟ್ಟಿಸೋದು. ಬಡ ಬಗ್ಗರಿಗೆ ಮದುವಿ, ಮುಂಜುವಿ ಮಾಡಾಕ ಅನುಕೂಲ ಆಗೋದಿಲ್ಲನ... ಅದನ ಕಟ್ಟಿಸಿದರ ಕೆಟ್ಟ ಆಗತೈತೇನ." ಎಂದು ಪಂಚಾಕ್ಷರಿ ಮಾತು ಬಂತು.